Reg No M. 1229 Sri 5—3—1956

೩೯ನೇ ವರ್ಷ - 39 th Year

ಸತ್ಯವಾದಿ

SATYAVADI

ಬೆಲೆ ಪ್ರತಿ 3 ಪೈ] ಸ್ಥಾಪಕರು : ಅರಮನೆ ಸಿಕಸ್ತೇದಾರ್ ಎಂ. ವಿ. ಸುಬ್ರಾಯರು

ಕುಡಿತದಲ್ಲಿ ಯಾರ ಕೈ ಮೇಲಿದೆ ?

ಮೊದಲನೆಯದು ಅಮೇರಿಕಾ
ಎರಡನೆಯದು ಬ್ರಿಟನ್ನು
ಮೂರನೆಯದು ಪಶ್ಚಿಮ ಜರ್ಮನಿ

ಈ ಮೂರು ದೇಶಗಳೂ ಕುಡಿತದಲ್ಲಿ ಬಹುಮಾನ ಪಡೆಯಲು ಅರ್ಹವಾಗಿವೆ.

ವಕೀಲರಿಗೆ ಶಿಕ್ಷೆ

ದೇವೀಕೋಟೆ ಮಾ 1— ಒಬ್ಬರ ಎಸ್ಟೇಟಿಗೆ ರಿಸೀವರ್‌ರಾಗಿ ನಿಯುಮಿಸಲ್ಪ ಇಬ್ಬರು ಅಡ್ವೊಕೇಟರು ಅದರ ಹಣದಲ್ಲಿ ರೂ 18 ಸಾವಿರ ದ ರುಪಯೋಗಪಡಿಸಿಕೊಂಡ ಅಪಾದನೆಗಾಗಿ ತಲಾ 3 ತಿಂಗಳು ಸಾದಾ ಸಜ ಮತ್ತು ರೂ 750 ಜುಲ್ಮಾನೆ ವಿಧಿಸಲ್ಪಟ್ಟರು

The Palace, Mysore,
22nd February 56.

TENDER NOTICE

Sealed Tenders for the supply of provisions, etc., to the Palace for the year 1956 - 57 i. e. from 1—4—1956 to 31—3—1957 will be received by the undersigned up to 3 - 0 P. M. on Wednesday, the 14th March 1956, at the Palace Office, Mysore.

Particulars of Tender can be had from the Muneeb, Palace Mothikhana Department, Mysore. The flower contract is split into two separate items and tender has to be given separately for each.

J. B. Mallaradya,
Huzur Secretary
to His Highness the Maharaja
of Mysore, Mysore.

ಪಾಳೆಯ ಪಂಚಾಂಗ

ಅ॥ ಮಹಾವಿದ್ವಾ೯ ದೈವಜ್ಞ ಶಿಖಾಮಣಿ
ಸಂಪಶ್ಯಕೃಷ್ಣಜೋಯಿಸರಿಂದ

ಶಂಭವಸಂವತ್ಸರ ನವಮಿ ಮೂಲ

ಗಡೀಪಾರು ನಿರಾಕರಣೆ

ದೇವಾ ಮಾ 4— ಅಖಿಲ ಭಾರತ ಪ್ರಜಾಸೋಷಲಿಸ್ಟ ಪಕ್ಷದ ಮಹಾ ಕಾರ್ಯದರ್ಶಿ ಶ್ರೀಲೋಕ ಸಿಂಗರು ಗಡೀಪಾರು ಆಜ್ಞೆಯಂತೆ ವರ್ತಿಸಲು ನಿರಾಕರಿಸಿದ್ದರಿಂದ ದಸ್ತಗಿರಿಮಾಡಲ್ಪಟ್ಟಿರುವರು

ಮೂರು ಮಂದಿ ಅದೃಷ್ಟವಂತರು

ಕಲ್ಕತ್ತಾ ಮಾ 3— ಇಂದಿನ ಕುದುರೆ ಜೂಜಿನಲ್ಲಿ 3 ಮಂದಿ ಟ್ರಿಬಲ್ ಈವೆಂಟಿನಲ್ಲಿ ಗೆದ್ದು ತಲಾ ರೂ 25169 ಪಡೆದರು

ಆರ್ಯರ ಕಾಲದ ವಸ್ತುಗಳು

ಲಕ್ನೌ ಮಾ 3— ಅನಾಘಾ ಎಂಬಾರ ಎಂಬ ನಗರದಲ್ಲಿ ಒಳಚರಂಡಿಗಾಗಿ ಅಗೆಯುತ್ತಿದ್ದಾಗ 3 ಸಾವಿರ ವರ್ಷಗಳ ಹಿಂದಿನ ಜನರು ಉಪಯೋಗಿಸುತ್ತಿದ್ದ ಕೆಲವು ವಸ್ತುಗಳು ಸಿಕ್ಕಿವೆ

ಅನೆಮರಿ ಬಹುಮಾನ

ಮೈಸೂರು ಮಾ 2— ಇರಾನಿನ ಪಾರವರು ಪ್ರಾಣಿಸಂಗ್ರಹಾಲಯಕ್ಕೆ ಭೇಟಿ ಕೊಟ್ಟಾಗ ಅವರಿಗೆ ಒಂದು ಅನೇಮರಿಯನ್ನು ಬಹುಮಾನವಾಗಿ ಕೊಡಲಾಯಿತು.

ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ

ನಿನ್ನೆ ನಡೆದ ಡೈರೆಕ್ಟರುಗಳ ಚುನಾವಣೆಯಲ್ಲಿ, ಚುನಾಯಿತರಾದವರು—

ಶ್ರೀಗಳಾದ ಎ. ಕೃಷ್ಣಮೂರ್ತಿರಾವ್, ಡಾ॥ ಬಿ. ಜಿ. ದಾಸ್, ಹೆಚ್. ಕೆ. ಕಾಮಾಂಸ್ವಾಮಿ, ಎಂ. ಸಿ ಮಹಾದೇವಸ್ವಾಮಿ, ಕೆ. ಸೇಕುರಾಮ್, ಎಸ್ ನಾರಾಯಣರಾವ್, ಎಂ. ಆರ್ ಸಿ. ಬಸಪ್ಪ, ಎಂ ಎಸ್. ತಿಮ್ಮಯ್ಯ, ಎಸ್ ಶೇಷಗಿರಿರಾವ್, ಬಿ ಆರ್. ನಾಯ್ಡು, ಜಿ ಜನಾರ್ಧನ ನಾಯ್ಡು ಟಿ. ಎಸ್. ಸುಬ್ಬರಾವ್, ವೇದಾಂತ ಹೆಮ್ಮಿಗೆ, ಎಂ ಬಿ. ವೃಹದೇವಯ್ಯ, ಬಿ. ವಿ. ಕೆ ಮೂರ್ತಿ.

ಗಾಡ್ರೆ ಗುರೂಜಿಯವರಿಂದ ಗೋವಾದಲ್ಲಿ ಸತ್ಯಾಗ್ರಹ

ಬೈಜಿಲಿನ ಸಾಂಟೋಸು ಪ್ರದೇಶದಲ್ಲಿ ಭೂಪಾತದಿಂದು ಒಂದು ಸಹಸ್ರ ಜನ ಸತ್ತಿದ್ದಾರೆ

ಮದರಾಸಿನ ಕೌನ್ಸಿಲಿನ ವಿರೋಧ ಪಕ್ಷದನಾಯಕರಾದ ಡಾ॥ ಎ ಲಕ್ಷ್ಮಣಸ್ವಾಮಿ ಮೊದಲಿಯಾರು ಕೌನ್ಸಿಲಿನಲ್ಲಿ ಪಾಂತ ಮದ್ಯವಿಮಗಡನೆ ಕಾರ್ಯವನ್ನು ಉಗ್ರವಾಗಿ ಖಂಡಿಸಿ ಅದರಿಂದ ಭಾರತದ ಐಕ್ಯತೆಗೆ ಭಂಗವುಂಟಾಯಿತೆಂಬುದನ್ನು ಚರಿತ್ರೆಯಲ್ಲಿ ಬರೆದಿಡಲಾಗುವದೆಂದು ತಿಳಿಸಿದರು.

ಹೈದರಾಬಾದ್ 3 — ಇಲ್ಲಿನ ಶಾಸನ ಸಭೆಯಲ್ಲಿ ಮಂಡಿಸಲಾದ ಅಂದಾಜು ಪಟ್ಟಿಯಲ್ಲಿ 4-3 ಕೋಟಿ ರೂ ಪೋಲಾಗಿದೆ ಅಂದಾಜುಪಟ್ಟಿ ಭಾಷಣ ಮಾಡಿದುದು – ಹಿಂದಿಯಲ್ಲಿ ಇದೇ ಮೊದಲು

ನವ ದೆಹಲಿ 3 — ರಾಜಪ್ರಮುಖರು ಮತ್ತು ಗವರ್ನರರ ಸಮ್ಮೇಳನದ ಕಡೆ ದಿನ ಇಂದು ಪಾಂತ ಮದ್ಯವಿಮಗಡನೆ ಬಗ್ಗೆ ಚರ್ಚೆಯಾಯಿತು

ಪಿಲಾಜಿ 3 — ಪಾಕಿಸ್ತಾನ ಗಡಿ ಪೋಲೀಸರು ನಿನ್ನೆ ಎರಡನೆ ಬಾರಿ ಬಹಾರ್ ಜಿಲ್ಲಾ ಗಡಿ ಪ್ರದೇಶದಲ್ಲಿ ಗೋಲೀಬಾರು ಮಾಡಿರುತ್ತಾರೆ

ನವ ದೆಹಲಿ 3 — ಅಧಿಕ ಸಂಬಳಕ್ಕಾಗಿ ತಾವು ಸಲ್ಲಿಸಿರುವ ಬೇಡಿಕೆಯನ್ನು ನೆರವೇರಿಸಿ ಕೊಡದಿರುವದಕ್ಕೆ ಪ್ರತಿಭಟನೆಯಾಗಿ ಮಾರ್ಚ್ 6 ರಿಂದ ಮುಂದೆ ಫೆಬ್ರವರಿ ತಿಂಗಳ ಸಂಬಳ ತೆಗೆದುಕೊಳ್ಳಲು ನಿರಾಕರಿಸುವ ರೈಲ್ವೆ ಕಚೇರಿಗಳ 6 ಸಾವಿರಕ್ಕೂ ಮೇಲ್ಪಟ್ಟ ಗುಮಾಸ್ತರು ಇಂದು ಪಾರ್ಲಿಮೆಂಟು ಭವನದ ಎದುರು ಪ್ರದರ್ಶನ ಮಾಡಿದರು

ಬೆಂಗಳೂರು 4 — ದ್ವಿತೀಯ ಪಾಂಚವಾರ್ಷಿಕ ಯೋಜನೆ ಕಾಲದಲ್ಲಿ ಮೈಸೂರು ಸರ್ಕಾರದ ವತಿಯಿಂದ ಇಲಾಖೆ ಬಹುಮುಖ ಚಟುವಟಿಕೆಗಳಿಗೆ ರೂ 17.74 ಲಕ್ಷಗಳನ್ನು ನೆಚ್ಚಿ ಮಾಡಲು ಯೋಜನೆಯೊಂದನ್ನು ತಯಾರಿಸಿದೆ

ಮಂಡ್ಯ ಪೌರಸಭೆ ಚುನಾವಣೆಗೆ 20 ಸ್ಥಾನಗಳಿಗೆ 74 ಜನ ಸ್ಪರ್ಧಿಸಿದ್ದಾರೆ

ಪಾವಂಜವಾಡಿ ಮಾ 3— ಹಿಂದೂ ವಿಶ್ವ ಭಾರತೀಯ ರೊಡನೆ ತಾವು ಗೋವಾದಲ್ಲಿ ಏಪ್ರಿಲ್ 18 ರಂದು ಸತ್ಯಾಗ್ರಹ ನಡೆಸಲು ನಿರ್ಧರಿಸಿರುವುದಾಗಿ ಆಚಾರ್ಯ ಎನೋಬಾ ಭಾವೆಯವರ ಶಿಷ್ಯ ಗಾಡ್ರೆ ಗುರೂಜಿ ತಿಳಿಸಿದ್ದಾರೆ

ಬೆಂಗಳೂರು 4 — 55—56 ನೆ ಇಸವಿ ಸಾಲಿನಲ್ಲಿ ದೇವಾಲಯ ಪ್ರವೇಶ ಕಾನೂನು ಪ್ರಕಾರ ಒಂದು ಕೇಸೂ ದಾಖಲಾಗಿಲ್ಲ

ತುಮಕೂರು ಪೌರಸಭೆ ಚುನಾವಣೆಯಲ್ಲಿ ಮತದಾನ ಪೆಟ್ಟಿಗೆಯೊಂದರಲ್ಲಿ 13 ಆಣೆಗಳಿದ್ದವು

ಕಲ್ಕತ್ತಾ ಮಾ 3— ಪಶ್ಚಿಮ ಬಂಗಾಳ ಬಿಹಾರ್ ಪ್ರಾಂತಗಳ ವಿಲೀನದ ಸಲಹೆಯನ್ನು ವಿರೋಧಿಸಲು ಮಾರ್ಚ್ 15 ರಿಂದ ನಿರ್ದಿಷ್ಟ ಕಾಲದವರೆಗೆ ಪ್ರಾಂತಾದ್ಯಂತ ಅಸಹಕಾರ ಚಳವಳಿಯನ್ನು ನಡೆಸಲು ಪಶ್ಚಿಮ ಬಂಗಾಳ ಭಾಷಾ ಪ್ರಾಂತ ಪುನರ್ವಿಂಗಡಣ ಸಮಿತಿಯು ನಿರ್ಧರಿಸಿದೆ

ಬೆಂಗಳೂರು 3 — ಕಲ್ಕತ್ತಾದ ಯುನೈಟೆಡ್ ಕಮರ್ಷಿಯಲ್ ಬ್ಯಾಂಕಿನ ಸುಮಾರು ರೂ 1250 ನ್ನು ಭಾರಿ ಮೋಸದ ಅವಾದನೆಗೊಳಗಾಗಿರುವ ಶಾಮಸುಂದರಲಾಲ್‌ಸೊಬನನ್ನು ಬಂಧಿಸಿದ ಮೈಸೂರು ಪೋಲೀಸು ಅಧಿಕಾರಿಗಳ ಮತ್ತು ನೌಕರರಿಗೆ ಬಹುಮಾನವಿತ್ತಿದೆ

ನವದೆಹಲಿ ಮಾ 4— ಇಲ್ಲಿಯ ಪೋಲೀಸರು, ತಾವು ಧರಿಸುತ್ತಿರುವ ಉಡುಪು ಬ್ರಿಟಿಷರಿಂದ ರೂಪಿತವಾಗಿದ್ದು ಗುಲಾಮಗಿರಿಗೆ ತಕ್ಕವಾಗಿವೆಯೆಂದೂ, ಅದಕ್ಕಾಗಿ ಬೇರೆ ರೀತಿಯ ಉಡುಪನ್ನು ತಿಳಿಸಿ ಅಭಿಪ್ರಾಯವನ್ನು ಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿರುವರೆಂದೂ ವರದಿಯಾಗಿದೆ

ಕೊಪ್ಪಳ ಮಾ 1— ಹಲ್ಲಿಯ ರೈಲ್ವೇ ಸ್ಟೇಷನ್ ಪೋಸ್ಟಾಫೀಸಿನ ಹತ್ತಿರವಿರುವ ಭಾವಿಯೊಂದರಲ್ಲಿ ಸುಮಾರು ಎಂಟು ಸಾವಿರ ಅಂಚೆ ಕಾಗದಗಳನ್ನು ಪಿಂಡಿ ಕಟ್ಟಿ ಎಸೆದಿರುವುದು ಪತ್ತೆಯಾಗಿದೆ — ಒರ್ವ ಅಂಚೆ ನೌಕರನು ಸಸ್ಪೆಂಡು ಮಾಡಲ್ಪಟ್ಟಿದಾನೆ — ತನಿಖೆ ನಡೆಯುತ್ತಿದೆ

ಚಿಕ್ಕ ಚಾರಿತ್ರಿಕ ನಾಟಕ—

ಜೇಬುನ್ನೀಸಾ

(ಮುಂದುವರಿದದ್ದು)

ಔರಂ— (ಆಶ್ಚರ್ಯಚಕಿತನಾಗಿ) ರಜಿಯಾ! ಷಹಜಾದೀ....ಸೇವಕಿ!

ಹಸ— ಹೌದು, ಅಲಂವನಾಹ್.

ಔರಂ— (ಹಲ್ಲುಗಳನ್ನು ಕಡಿಯುತ್ತಾ) ರಜಿಯಾ, ಎಷ್ಟು ಸಾಹಸ ಹಸ್ಕಿ ಅಲ್ಲೀ!

ಹಸ— ಅಲಂಪನಾಹ್

ಔರಂ— ಷಹಜಾದೀ ಜೇಬುನ್ನೀಸಾ ಮಹಲ್ಲಿನ ಸುತ್ತೂ ಪಹರೆ ಏರ್ಪಾಟು ಮಾಡಿಸು: ಒಂದು ಹುಳುವೂ ಒಳಕ್ಕೆ ಹೋಗಕೂಡದು, ಒಂದು ಹುಳುವೂ ಹೊರಕ್ಕೆ ಬರಕೂಡದು

ಹಸ— ಜೋಹುಕುಂ (ನಿಷ್ಕ್ರಮಣ)

ಔರಂ— (ಸೋಫಾದ ಮೇಲೆ ಬದ್ದಕೊಳ್ಳುತ್ತಾನೆ; ಕಣ್ಣುಗಳು ಹುಣಿಸೆಯ ಕೆಂಡದಂತಿರುತ್ತವೆ): ಸ್ವಲ್ಪ ಸಮಯಾನಂತರ ಸೋಫಾದಿಂದ ಏಳುತ್ತಾನೆ: ನಿಲುವುಕನ್ನಡಿಯ ಮುಂದೆ ನಿಂತುಕೊಳ್ಳುತ್ತಾನೆ; ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡುತ್ತಾನೆ: ಪ್ರತಿಬಿಂಬವು ವಿಕಟವಾಗಿ ನಗುತ್ತದೆ; ರಾದ್ಧಾಕಾಂತನನ್ನು ಹೊಡೆದುತ್ತಾನೆ; ಹಲ್ಲುಗಳನ್ನು ಪಟಪಟ ಕಚ್ಚಿಕೊಳ್ಳುತ್ತಾನೆ; ರಜಿಯಾ! ಷಾಹಜಾದೀ! (ಎಂದು ಕೂಗುತ್ತಾನೆ)

[ತೆರೆಯೊಳಗಿಂದ ಪುನಃ ವಿಕಟವಾದ ನಗು; ಹೆಚ್ಚಾಗಿ ಗಾಢವಾಗಿ)

ಔರಂ— (ವಿಸ್ಮಿತನಾಗುತ್ತಾನೆ, ಹಿಂದಕ್ಕೆ ನಡೆಯುತ್ತಾನೆ; ತೆರೆಯಲ್ಲಿ ನಗುವು ಕೇಳಿಸುವುದಿಲ್ಲ) ಮೊಗಲ್ ಸಾಮ್ರಾಟ್ ಔರಂಗಜೇಬುವಿನ ಹೊಟ್ಟೆಯಲ್ಲಿ ಒಬ್ಬ ರಾಜದ್ರೋಹಿಯು ಜನ್ಮವೆತ್ತುವಳೇ!.....ಬಾಗಿ.....(ತೆರೆಯೊಳಗೆ ಪುನಃ ನಗು .... 5-6 ಕಂಠಗಳಿಂದ ಕೇಳಿಬರುತ್ತದೆ)

ಔರಂ— (ಹುಚ್ಚನಂತೆ) ಹೊರಡು! ನಡಿ! (ಗಟ್ಟಿಯಾಗಿ ಕೂಗಿಕೊಳ್ಳುತ್ತಾನೆ; ಹುಸೇಕ್ ಭಯಕಂಪಿತನಾಗಿ ಹೊರಟುಹೋಗುತ್ತಾನೆ; ತೆರೆಯಲ್ಲಿ ನಗು ನಿಂತುಹೋಗುತ್ತದೆ)

ಔರಂ— ಔರಂಗಜೇಬನ ರಕ್ತದಲ್ಲಿ ಇಷ್ಟು ಮಾಲಿನ್ಯವೇ! ಅಸಂಭವ! (ಅಲ್ಲ – ಅಲ್ಲ ಜಂಬ ಕೂಗು: ವಿಕಟವಾಗಿ ತೆರೆಯಲ್ಲಿ ಪುನಃ ನಗು: ಔರಂಗಜೇಬನು ನಿಶ್ಚೇಷ್ಟಿತನಾಗುತ್ತಾನೆ; ನಗುವು ನಿಲ್ಲುವುದಿಲ್ಲ)

[ತೆರೆಯು ಬೀಳುವುದು]

— ೭ —

ಆಕಾಶದ ಮಧ್ಯದಲ್ಲಿ ಮೋಡಗಳು; ಮೋಡಗಳ ಮಧ್ಯೆ ಹುಣ್ಣಿಮೆಯ ಚಂದ್ರ; ಚಂದ್ರನ ಬೆಳದಿಂಗಳಲ್ಲಿ ಜೇಬುನ್ನೀಸಾ ರಾಜಕುಮಾರಿ ಮತ್ತು ದಿಲೀಪ್ ರಾಜಕುಮಾರ; ಜೇಬುನ್ನೀಸಾ ರಹಸ್ಯಮಂದಿರದ ಬಾಲ್ಕನಿಯ ಮೇಲೆ ಈ ಇಬ್ಬರು ಪ್ರೇಮಿಗಳು ಪ್ರಪಂಚವನ್ನು ಮರೆತು ಒಬ್ಬರಲ್ಲೊಬ್ಬರು ಲೀನರಾಗಿ ಪ್ರಣಯ ಸಾಮ್ರಾಜ್ಯಕ್ಕೆ ಅಧಿಪತಿಗಳಾದರು.

ಸ್ವಲ್ಪ ಸಮಯಿದವರೆಗೂ ಎಲ್ಲವೂ ನಿಶ್ಶಬ್ಧ

ಜೇಬು— (ನಿಶ್ಶಬ್ದವನ್ನು ಸೀಳಿಕೊಂಡು) ದಿಲೀಪ್!

ದಿಲೀ— ಜೇಬೂ!

ಜೇಬು— ಎಷ್ಟು ದಿನ ಈ ಪ್ರಣಯ?

ದಿಲೀ— ಇದು ಪ್ರಣಯವೇ ಜೇಬೂ?

ಜೇಬು— ಸ್ವೇಚ್ಛೆ ಇಲ್ಲದ ಪ್ರಣಯ: ದಿನಂಪ್ರತಿ ನಮ್ಮ ಪ್ರಣಯಕ್ಕೆ ವಿಘ್ನ, ಕ್ಷಣಕ್ಷಣಕ್ಕೂ ಭಯ!

ಜೇಬು— ಇಡೀ ಲೋಕಕ್ಕೆ ಬೆಳಕನ್ನು ಕೊಡುತ್ತಿರುವ ಚಂದ್ರಭಗವಾನನ ಬೆಳದಿಂಗಳಲ್ಲಿ ಬಚ್ಚಿಟ್ಟುಕೊಂಡಿರುವ ನಮ್ಮನ್ನು ಯಾರು ಏನು ಮಾಡಬಲ್ಲರು ಜೇಬೂ?

— ಸಶೇಷ

ವಿವಿಧ ವರ್ತಮಾನ

ನವದೆಹಲಿ ಮಾ 2— ರಾಜ್ಯಪಾಲರ ಮತ್ತು ರಾಜಪ್ರಮುಖರ ವಾರ್ಷಿಕ ಸಮ್ಮೇಳನದಲ್ಲಿ ಪಶ್ಚಿಮಬಂಗಾಳದ ರಾಜ್ಯಪಾಲರೂ, ಮೈಸೂರು, ಹೈದರಾಬಾದು ಮತ್ತು ತಿರು-ಕೊಚ್ಚಿಯ ರಾಜಪ್ರಮುಖರೂ ಭಾಗವಹಿಸಲಿಲ್ಲ.

ಭಾರತ ಸರಕಾರವು 1951 ರಲ್ಲಿರೂ 27000 ಬೆಲೆಯ ಖಾದಿಯನ್ನು ಕೊಂಡಿದ್ದು 1955 ರಲ್ಲಿ ಈ ಮೌಲ್ಯವು 87 ಲಕ್ಷ ರೂಗಳಿಗೆ ಏರಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಶಾಲಾ ಮಕ್ಕಳ ಅನೌಪಚಾರ್ಯ ಸೇವೆಗಳಿಗಾಗಿ 1.26 ಕೋಟಿ ರೂಗಳು ಒದಗಿಸುವ ಉದ್ದೇಶವಿದೆ.

ಭಾರತದಲ್ಲಿ ಹಾಲು ಮತ್ತು ಹಾಲಿನವಸ್ತುಗಳ ಉತ್ಪಾದನೆಯು ವಾರ್ಷಿಕ ಮೌಲ್ಯವು 800 ಕೋಟಿ ರೂಗಳಾಗುವುದೆಂದು ಅಂದಾಜು ಮಾಡಲಾಗಿದೆ.

ನ್ಯೂಯಾರ್ಕ್ ಮಾ 2— ಪೆಸಿಫಿಕ್ ಪ್ರದೇಶದಲ್ಲಿ ಹೈಡ್ರೋಜನ್ ಬಾಂಬು ಪ್ರಯೋಗ ನಡೆಸಲು ಅಮೇರಿಕಾಕ್ಕೆ ಯಾವ ಹಕ್ಕಿದೆ ಎಂಬ ಬಗ್ಗೆ ಪ್ರಪಂಚಕೋರ್ಟು ತೀರ್ಮಾನಮಾಡಬೇಕೆಂದು ಪ್ರಪಂಚ ಸುಸ್ಥಿತಿ ಪ್ರಸ್ಟೀಸಿವ್ ಕೌನ್ಸಿಲಿನಲ್ಲಿ ಭಾರತ ನಿರ್ಣಯ ತಂದಿದೆ

ನ್ಯೂ ಅಪೆರಾ ಶ್ರೀ — ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲಾಗುತ್ತಿದೆ

ಆದರ್ಶ 10 ನೇ ವಾರ ❁ ಆದರ್ಶ ಸತಿ

ಪಾತ್ರ: ಆರ್. ನಾಗೇಂದ್ರರಾವ್, ಜಮುನ, ಜಾನಕಿ, ಮಾಲತಿ, ಮೋಹನ

ಮಹೋನ್ನತ ಕನ್ನಡ ಚಿತ್ರ [ದಿನ 3 ಆಟಗಳು]

ವುಡ್‌ಲ್ಯಾಂಡ್ಸ್ ಶ್ರೀ — 2-3-56 ರಿಂದ

❁ ಭಾಗಂ ಭಾಗ್ ❁

ತಾರಾಗಣ— ಭಗವಾನ್, ಶಶಿಕಲಾ, ಕಿಶೋರ್‌ಕುಮಾರ್, ಸ್ಮೃತಿ ಬಿಶ್ವಾಸ್

ನೇತ್ರಾನಂದ ನೃತ್ಯಗಳು, ಕರ್ಣಾನಂದ ಸಂಗೀತ ಆಶ್ಚರ್ಯಕರ ಡಂಗುಬಡಿಸುವ ಸನ್ನಿವೇಶಗಳಿಂದ ತುಂಬಿತುಳುಕುತ್ತಿರುವ ಅತ್ಯಂತ ಮನರಂಜನೀಯ ಹಿಂದಿ ಚಿತ್ರ.

ದಿನವಹಿ 3 ಪ್ರದರ್ಶನ

Protect the Cow ಗೋ ಸಂರಕ್ಷಣಮಾಡಿ

'ಗೋರಕ್ಷಣ' ಪತ್ರಿಕೆಗೆ ಚಂದಾದಾರರಾಗಿರಿ; ವಾರ್ಷಿಕ ಚಂದ 8 ಆಣೆ

ಪ್ರೋತ್ಸಾಹಕ ಚಂದಾ ಒಂದೇಸಾರಿ ರೂ 10: ಅವರಿಗೆ ಸದಾ ಪತ್ರಿಕೆ ಉಚಿತ

ಗೋರಕ್ಷಣೆ, ಪಶುಪಾಲನೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ತುಂಬಿಕೊಂಡಿರುವ ಏಕೈಕ ಕನ್ನಡ ಪತ್ರಿಕೆ

ವಿಳಾಸ: ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ರಣಜಿತ್ ಈ ದಿವಸ ಜಾ ಸೂ ಸ್ (ಹಿಂದಿ)

ಶಕ್ತಿಸುಧಾ — ಉತ್ಸವ ಟಾನಿಕ್ —

Edited, Printed & Published by Dharma Prachara Nirata M. S Krishna Rao, at the Satyavadi Press, Chamrajpuram Mysore